# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
## (ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ,
ನಂ.29, ವಿಜಯನಗರ 2ನೇ ಹಂತ
ಹಿನಕಲ್, ಮೈಸೂರು-17
CIN:U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನೆ ಉಪ ವಿಭಾಗ,ಬನ್ನೂರು
ದೂರವಾಣಿ ಸಂಖ್ಯೆ : 08227 275506/07
E-Mail ID : cescbannur@gmail.com

ದಿನಾಂಕ 20.07.2017 ರಂದು ಬೆಳಿಗ್ಗೆ 11.00 ಗಂಟೆಗೆ **ಅಧೀಕ್ಷಕ ಇಂಜಿನಿಯರ್ (ವಿ) ಕಾ ಮತ್ತು ಪಾ ವೃತ್ತ,** ಮೈಸೂರು ರವರ ಅಧ್ಯಕ್ಷತೆಯಲ್ಲಿ ಬನ್ನೂರು ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.

| | |
|---|---|
| ಶ್ರೀ ನರಸಿಂಹೇಗೌಡ ಎನ್ | ಅಧೀಕ್ಷಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವೃತ್ತ, ಮೈಸೂರು. |
| ಶ್ರೀ ಸುನೀಲ್‌ಕುಮಾರ್ ಎ ಎ | ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ ನಂಜನಗೂಡು. |
| ಶ್ರೀ ಮಹದೇವಯ್ಯ ಎಸ್ | ಸ.ಕಾ.ಇಂ (ವಿ) ಚಾವಿಸನಿನಿ, ಬನ್ನೂರು ಉಪ-ವಿಭಾಗ. |
| ಶ್ರೀಮತಿ ನಾಗವೇಣಿ ಎಂ | ಸ.ಇಂ (ವಿ) ತಾಂತ್ರಿಕ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ಹರೀಶ್ ಜಿ | ಸ.ಇಂ (ವಿ) ಬನ್ನೂರು ಪಟ್ಟಣ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ವಿಶ್ವನಾಥ್ ಎಸ್ ಎಲ್ | ಸ.ಇಂ (ವಿ) ಚಾಮನಹಳ್ಳಿ ಶಾಖೆ , ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ಸತೀಶ್ ಎಸ್ ಎಸ್ | ಸ.ಇಂ (ವಿ) ಮಾದಿಗಹಳ್ಳಿ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ತ್ಯಾಗರಾಜು ಟಿ | ಕಿ.ಇಂ (ವಿ) ಕೇತುಪುರ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ವಿಜಯ್‌ಕುಮಾರ್ ಕೆ | ಕಿ.ಇಂ (ವಿ) ತುಂಬಲ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ಮಹೇಶ್.ಎಂ. | ಪ್ರಭಾರ ಕಿ. ಸ, ಕಂದಾಯ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |

ಸಹಾಯಕ ಇಂಜಿನಿಯರ್ (ವಿ) ಆದ ಶ್ರೀ ಸತೀಶ್ ರವರು ಹಾಜರಿದ್ದ ಅಧಿಕಾರಿ / ನೌಕರರುಗಳನ್ನು, ರೈತ ಮುಖಂಡರು ಹಾಗೂ ವಿದ್ಯುತ್ ಗ್ರಾಹಕರನ್ನು ಸಭೆಗೆ ಸ್ವಾಗತಿಸಿದರು.

ದಿನಾಂಕ :23.05.2017 ನಡೆದ ಜನ ಸಂಪರ್ಕ ಸಭೆಯಲ್ಲಿ ಸ್ವೀಕರಿಸಿದ ದೂರುಗಳ ಬಗ್ಗೆ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಕೂಲಂಕುಷವಾಗಿ ಪರಿಶೀಲಿಸಿ, 29 ದೂರುಗಳಲ್ಲಿ 19 ದೂರುಗಳನ್ನು ಸರಿಪಡಿಸಲಾಗಿದ್ದು ಮತ್ತು ಉಳಿದ 10 ದೂರುಗಳನ್ನು ಶೀಘ್ರವಾಗಿ ಸರಿಪಡಿಸಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಉಪವಿಭಾಗಾಧಿಕಾರಿಯವರಿಗೆ ಮತ್ತು ಶಾಖಾಧಿಕಾರಿಗಳಿಗೆ ಸೂಚಿಸಿದರು. ನಂತರ ಸಭೆಯಲ್ಲಿ ಹಾಜರಿದ್ದ ರೈತಮುಖಂಡರು, ರೈತರು ಗ್ರಾಹಕರು ಮತ್ತು ಸಾರ್ವಜನಿಕರಿಂದ ಮೌಖಿಕವಾಗಿ/ಲಿಖಿತವಾಗಿ ದೂರುಗಳನ್ನು ಸ್ವೀಕರಿಸಲಾಯಿತು.

ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ ರಾಮಕೃಷ್ಣ ಅತ್ತಳ್ಳಿ | ಇವರು ಪರಿವರ್ತಕದ ಲೀಡ್ ವೈರ್ ಬದಲಾಯಿಸುವಂತೆ ಮೌಖಿಕವಾಗಿ ದೂರು ಸಲ್ಲಿಸಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 2. | ಶ್ರೀ ದೇವರಾಜು, ಅತ್ತಹಳ್ಳಿ, ಕಬ್ಬು ಬೆಳೆಗಾರರ ಸಂಘ, | ಇವರು ಕಬ್ಬಿಣದ ಕಂಬಗಳನ್ನು ಮತ್ತು ಹಳೆ ತಾಮ್ರದ ತಂತಿಯನ್ನು ಹೊಸ ಅಲುಮಿನಿಯಂ ವೈರ್ ಗಳಿಂದ ಬದಲಾಯಿಸಿರುವ ಬಗ್ಗೆ ವಿವರ ಕೋರಿರುತ್ತಾರೆ ಹಾಗೂ ಕಾಂಕ್ರೀಟ್ ಕಂಬಗಳನ್ನು ಬದಲಾಯಿಸಿರುವ ಬಗ್ಗೆ ಪೂರ್ಣ ಮಾಹಿತಿಯನ್ನು ಕೋರಿರುತ್ತಾರೆ<br><br>ಟಿ ವಿ ಕೇಬಲ್ ನಡೆಸುವವರು ನಿಮ್ಮ ಇಲಾಖೆಯಿಂದ ಉಪಯೋಗಿಸಿಕೊಂಡಿರುವ ಕಂಬಗಳಿಗೆ ಎಷ್ಟು ಹಣ ಪಾವತಿ ಮಾಡಿರುತ್ತಾರೆ ಎಂಬ ವಿವರ ನೀಡಬೇಕೆಂದು ಕೋರಿರುತ್ತಾರೆ. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸದರಿ ವಿಷಯಕ್ಕೆ ಸೂಕ್ತ ಮಾಹಿತಿಯನ್ನು ನೀಡಲು ಸೂಚಿಸಿದರು |
| 3. | ಶ್ರೀ ಶಾರಧ ಹಿ. ಪ್ರಾ.ಶಾಲೆ ಹನುಮನಾಳು ಗ್ರಾಮ | ಇವರು 11 ಕೆ.ವಿ ಲೈನ್ ಶಿಫ್ಟ್ ಮಾಡಿಕೊಡುವಂತೆ ಲಿಖಿತ ದೂರು ಸಲ್ಲಿಸಿರುತ್ತಾರೆ. ಮತ್ತು ಈ ವಿಚಾರವಾಗಿ ಅನೇಕ ಬಾರಿ ಲಿಖಿತ ದೂರು ಸಲ್ಲಿಸಿದರೂ ಕೂಡ ಸ್ಥಳಾಂತರ ಮಾಡಿಕೊಟ್ಟಿರುವುದಿಲ್ಲ ಎಂದು ದೂರಿದರು | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಶಾರಧ ಹಿ. ಪ್ರಾ. ಶಾಲ ಮುಖ್ಯಸ್ಥರಿಗೆ ನಿಗಮದ ನಿಯಮಾನುಸಾರ ಹಣ ಪಾವತಿಸಿ 11 ಕೆ.ವಿ ಲೈನ್ ಶಿಫ್ಟ್ ಮಾಡಿಸಿಕೊಳ್ಳುವಂತೆ ತಿಳಿಸಿದರು. |
| 4. | ಶ್ರೀ ಲೋಕೇಶ್ ಕೇತುಪುರ | **ಕೇತುಪುರ ನಿರಂತರ ಜ್ಯೋತಿ ಫೀಡರ್** ಸ್ವಲ್ಪ ಮಳೆ ಬಂದರು ಸಹ ಕರೆಂಟು ಹೋಗುವುದು ಸರ್ವೆ ಸಾಮಾನ್ಯವಾಗಿದೆ ಎಂದು ದೂರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ ಮಾರ್ಗಗಳ ನಿರ್ವಹಣೆಗೆ ಸಂಬಂಧಿಸಿದಂತೆ ಅವಶ್ಯಕವಾಗಿ ಮಾಡಬೇಕಾಗಿರುವ ಎಲ್ಲಾ ವಿಧದ ಕಾರ್ಯಗಳನ್ನು ನಿರ್ವಹಿಸಲು ಕ್ರಮವಹಿಸುಂತೆ ಶಾಖಾಧಿಕಾರಿ ಮತ್ತು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ |

| | | | |
|---|---|---|---|
| | | | ರವರಿಗೆ ಸೂಚಿಸಿದರು. |
| 5. | ಶ್ರೀ ಕೃಷ್ಣಯ್ಯ ಕಂಚನಹಳ್ಳಿ, | ಊರಿನೊಳಗಿರುವ 18 ಕಬ್ಬಿಣದ ಕಂಬಗಳನ್ನು ಬದಲಾಯಿಸುವಂತೆ ದೂರು ನೀಡಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಕಂಬಗಳನ್ನು ಆದಷ್ಟು ಬೇಗ ಬದಲಾಯಿಸುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 6. | ಶ್ರೀ ಹೆಚ್ ಆರ್ ಮಹೇಶ್ ಹನುಮನಾಳು 9008154660 | ಹೆಚ್ಚುವರಿ ಪರಿವರ್ತಕವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.<br>11 ಕೆ.ವಿ ಲೈನ್ ಪದೆ ಪದೆ ಕರೆಂಟು ಹೋಗುವುದು ಸರ್ವೆ ಸಾಮಾನ್ಯವಾಗಿದೆ ಎಂದು ದೂರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಗಳಿಗೆ ಕಾರ್ಯಾದೇಶ ಆಗಿರುವ ಕೆಲಸಗಳನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳುವಂತೆ ಸೂಚಿಸಿದರು. |
| 7. | ಶ್ರೀ ಹೆಚ್ ಕೆ ರಾಮೇಗೌಡ, ಕೊಡಗಳ್ಳಿ | ತೋಟದ ಮನೆಗೆ **ನಿರಂತರ ಜ್ಯೋತಿ ಫೀಡರ್** ನಿಂದ ಇಲಾಖವತಿಯಿಂದ ಕರೆಂಟು ಕೊಡಬೇಕೆಂದು ಲಿಖಿತ ದೂರನ್ನು ನೀಡಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ) ರವರು ಮಾತನಾಡಿ ತೋಟದ ಮನೆಗೆ **ನಿರಂತರ ಜ್ಯೋತಿ ಫೀಡರ್** ನಿಂದ ಇಲಾಖವತಿಯಿಂದ ಕರೆಂಟು ನೀಡಲು ಸಾಧ್ಯವಿಲ್ಲ ನಿಮ್ಮ ಸ್ವಂತ ಖರ್ಚಿನಿಂದ ತೆಗೆದುಕೊಳ್ಳಬೇಕೆಂದು ತಿಳಿಸಿದರು. |
| 8. | ಶ್ರೀ ಕೆ ಎಸ್ ನಾಗೇಂದ್ರ, ಕುಂತನಹಳ್ಳಿ 9141644767 | ಐಪಿ ಸ್ಥಾವರಗಳಿಗೆ ಕಂಬ ಮತ್ತು ವೈರ್ ಗಳನ್ನು ಮಂಜೂರು ಮಾಡಿಕೊಡಬೇಕೆಂದು ಕೋರಿದರು.<br>ಐಪಿ ಸ್ಥಾವರಗಳಿಗೆ ಮಂಜೂರಾಗಿರುವ 25 ಕೆ.ವಿ.ಎ ಪರಿರ್ವತಕವನ್ನು ಚಾರ್ಜ್ ಮಾಡಿರುವುದಿಲ್ಲ ಎಂದು ದೂರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ರವರು ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು |
| 9. | ಶ್ರೀ ರಂಗಸ್ವಾಮಿ, ಮೇಘಳಕೊಪ್ಪಲು, ಕಬ್ಬು ಬೆಳೆಗಾರರ ಸಂಘ, 9141528082 | ಊರಿಗೆ ಹೆಚ್ಚುವರಿ ಪರಿವರ್ತಕವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.<br>**ನಿರಂತರ ಜ್ಯೋತಿ ಫೀಡರ್ ನಿಂದ** ಐಪಿ ಸ್ಥಾವರಗಳ ಬೇರ್ಪಡಿಸುವಿಕೆ ಸಂಬಂದವಾಗಿ ಮಂಜೂರಾಗಿರುವ ಎರಡು 25 ಕೆ.ವಿ.ಎ ಪರಿರ್ವತಕಗಳನ್ನು ಚಾರ್ಜ್ ಮಾಡಿರುವುದಿಲ್ಲ ಎಂದು ದೂರಿದರು.<br>ಪರಿರ್ವತಕದ ಸುತ್ತಲು ಬೆಳೆದಿರುವ ಬೇಲಿ ಹೊಬ್ಬೆಗಳನ್ನು ತೆಗೆಸಬೇಕೆಂದು ದೂರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ರವರು ಸ್ಥಳ ಪರಿಶೀಲಿಸಿ ತುರ್ತಾಗಿ ಕ್ರಮವಹಿಸಲು ಶಾಖಾಧಿಕಾರಿಗಳಿಗೆ ಸೂಚಿಸಿದರು.<br>ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಈ ಕೆಲಸವನ್ನು ಪೂರ್ಣಗೊಳಿಸಲು 10ದಿನಗಳ ಗಡುವು ನೀಡಿರುತ್ತಾರೆ |
| 10. | ಶ್ರೀ ನಾರಾಯಣ, ಬನ್ನೂರು, ಕಬ್ಬು ಬೆಳೆಗಾರರ ಸಂಘ, | ಇನ್ನು ಮುಂದೆ ಜನ ಸಂಪರ್ಕ ಸಭೆಯನ್ನು ಆಯೋಜಿಸಿದಾಗ ಆಹ್ವಾನ ಪತ್ರಿಕೆಯನ್ನು ಪಂ.ಅ.ಅಧಿಕಾರಿಗಳಿಗೆ ಮತ್ತು ಗ್ರಾ. ಪಂ | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ರವರು ಉಪವಿಭಾಗಾಧಿಕಾರಿಗಳಿಗೆ ಸೂಚನೆ |

| | | | |
|---|---|---|---|
| | | ಸದಸ್ಯರುಗಳಿಗೆ ನೀಡುವಾಗ ಸಹಿ ತೆಗೆದುಕೊಂಡು ನೀಡಬೇಕೆಂದು ತಿಳಿಸಿದರು. ಐಪಿ ಸ್ಥಾವರಗಳಿಗೆ ಎಲ್ ಟಿ ಮಾರ್ಗಗಳನ್ನು ಇಲಾಖವತಿಯಿಂದ ಮಂಜೂರು ಮಾಡಿಕೊಡಬೇಕೆಂದು ಶ್ರೀ ವೆಂಕಟೇಶ್ ರವರ(9008712375) ಪರವಾಗಿ ಕೇಳಿದರು<br>ಕಬ್ಬಿಣ ಕಂಬದ ಮೇಲಿರುವ ಮಲ್ಲು ಪರಿವರ್ತಕವು ಪದೆಪದೆ ಗ್ರೌಂಡ್ ಆಗುತ್ತಿದ್ದು ಈ ಬಗ್ಗೆ ಕ್ರಮ ಕೈಗೊಳ್ಳಲು ಮೇಲಧಿಕಾರಿಗಳಿಗೆ ಕೋರಿದರು.<br>ಪರಿರ್ವತಕದ ಸುತ್ತಲು ಬೆಳೆದಿರುವ ಬೇಲಿ, ಬಳ್ಳಿ ಗಿಡಗಳನ್ನು ತೆಗೆಸಬೇಕೆಂದು ದೂರಿದರು. | ನೀಡಿ ಸ್ಥಳ ಪರಿಶೀಲಿಸಿ ತುರ್ತು ಕ್ರಮ ಕೈಗೊಳ್ಳುವಂತೆ ತಿಳಿಸಿದರು.<br>ಐ.ಪಿ.ಡಿ.ಎಸ್ ಯೋಜನೆಯಡಿಯಲ್ಲಿ ಪರಿವರ್ತಕ ಕೇಂದ್ರದ ಕೆಲಸಗಳನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳುವಂತೆ ಸೂಚಿಸಿದರು. |
| 11. | ಶ್ರೀ ಮುಬಾರಕ್ ಉಲ್ಲಾ, ಕೊಡಗಲ್ಲಿ, 8453369133 | ಇವರ ಮನೆಯ ಮುಂದಿರುವ ಮೋರಿ ಒಳಗೆ ಇರುವ ಕಂಬವನ್ನು ಸ್ಥಳಾಂತರ ಮಾಡಿಕೊಡಬೇಕೆಂದು ದೂರು ಸಲ್ಲಿಸಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು |
| 12. | ಶ್ರೀ ಪ್ರಸನ್ನ, ಕೇತುಪುರ, 8710861811 | ಅಕ್ರಮ-ಸಕ್ರಮ ದಡಿಯಲ್ಲಿ ವಿದ್ಯುತ್ ಸಂಪರ್ಕಕ್ಕೆ ಹಣ ಪಾವತಿ ಮಾಡಿದ್ದು ಕಂಬ ಮತ್ತು ವೈರನ್ನು ಹಾಕಿಕೊಡುವಂತೆ ದೂರು ಸಲ್ಲಿಸಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಅಕ್ರಮ-ಸಕ್ರಮ ಯೋಜನೆಯಡಿ ಮೊದಲು ಅವಶ್ಯವಿರುವ ಕಡೆ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| 13. | ಶ್ರೀ ಮಧು, ಮೆಣಸಿಕ್ಯಾತನಹಳ್ಳಿ, 99972369276 | ಜೋರಾದ ಮಳೆಯಿಂದ ಕಂಬ ವಾಲಿದ್ದು, ಕ್ರಾಸ್ ಆರ್ಮ್‌ಗಳು ಮುರಿದಿದ್ದು ಮತ್ತು ಕಂಬಕ್ಕೆ ಕಟ್ಟಿದ್ದ ಗೈ ವೈರ್ ಗಳು ತುಂಡಾಗಿರುತ್ತದೆ ಇವೆಲ್ಲವನ್ನು ಸರಿಪಡಿಸಿಕೊಡಬೇಕಾಗಿ ಕೋರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು |
| 14. | ಶ್ರೀ ರಮೇಶ್, ಚಾಮನಹಳ್ಳಿ, 9880934265 | ಎಲ್ ಟಿ ಮಾರ್ಗದ ವೈರ್ ಗಳು ತುಂಬ ಹಳೆಯದಾಗಿದ್ದು ಪದೆಪದೆ ತುಂಡಾಗುತ್ತಿರುತ್ತದೆ ಆದ್ದರಿಂದ ಈ ಹಳೆ ವೈರನ್ನು ತೆಗೆದು ಹೊಸ ವೈರನ್ನು ಹಾಕಿಸಿಕೊಡಬೇಕೆಂದು ದೂರು ನೀಡಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಅಂದಾಜು ಪಟ್ಟಿಯನ್ನು ಶೀಘ್ರವಾಗಿ ಸಲ್ಲಿಸುವಂತೆ ಸೂಚಿಸಿದರು |
| 15. | ಶ್ರೀ ಸಿದ್ದರಾಜು, ಕೆಂಪೇಗೌಡನಕೊಪ್ಪಲು, 9900685482 | ರೋಡ್ ಕ್ರಾಸ್ ಆಗಿರುವ ಸರ್ವಿಸ್ ಮೇನ್ ವೈರ್ ತುಂಬ ಕೆಳಗಡೆ ಇರುವುದರಿಂದ ಕಂಬಗಳನ್ನು ಹಾಕಿ ಸರಿಪಡಿಸಬೇಕೆಂದು ಕೋರಿದರು. ಭದ್ರೇಗೌಡರ ಮನೆಯ ಹತ್ತಿರವಿರುವ ಎರಡು | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಆದಷ್ಟು ಬೇಗನೆ ಪರಿಶೀಲಿಸಿ ಕ್ರಮಕೈಗೊಳ್ಳುವಂತೆ |

| | | | |
|---|---|---|---|
| | | ಕಂಬಗಳು ಭೂಮಿ ಮಟ್ಟದಲ್ಲಿ ತಿಂದು ಹೋಗಿರುವುದರಿಂದ ಬದಲಾಯಿಸುವಂತೆ ದೂರಿರುತ್ತಾರೆ. | ಸೂಚಿಸಿದರು |
| 16. | ಶ್ರೀ ಸ್ವಾಮಿ, ಕುಂತನಹಳ್ಳಿ, 8970070739 | ಕುಂತನಹಳ್ಳಿಯಲ್ಲಿ ನಿರಂತರ ಜ್ಯೋತಿ/ ಐಪಿ ಫೀಡರ್ ಗಳ ಮಧ್ಯೆ ಅಂತರ ಕಡಿಮೆ ಇರುವುದರಿಂದ ಇದನ್ನು ಸರಿಪಡಿಸಬೇಕಾಗಿದೆ ಎಂದು ತಿಳಿಸಿದರು<br><br>ಮುದುಕಪ್ಪನ ಮನೆಯ ಹತ್ತಿರ ಹಳೆ ವೈರನ್ನು ತೆಗೆದು ಹೊಸ ವೈರನ್ನು ಹಾಕಿಸಿಕೊಡಬೇಕೆಂದು ದೂರಿದರು. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಆದಷ್ಟು ಬೇಗನೆ ಪರಿಶೀಲಿಸಿ ಎಲ್ ಟಿ ಹಳೆ ವೈರನ್ನು ತೆಗೆದು ಹೊಸ ವೈರನ್ನು ಬದಲಾಯಿಸುವಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿದರು. |
| 17. | ಶ್ರೀ ರಂಗಸ್ವಾಮಿ, ಮೇಘಳಕೊಪ್ಪಲು, 9448773481 | ಮುಖ್ಯ ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿರುವುದರಿಂದ ಕಂಬಗಳನ್ನು ಪಕ್ಕಕ್ಕೆ ಸ್ಥಳಾಂತರ ಮಾಡಬೇಕೆಂದು ಕೋರಿರುತ್ತಾರೆ.<br><br>25 ಕೆವಿಎ ಪರಿವರ್ತಕದಲ್ಲಿ 8 ಐಪಿ ಸೆಟ್ ಗಳಿದ್ದು ಹೆಚ್ಚುವರಿ ಪರಿವರ್ತಕವನ್ನು ಮಂಜೂರು ಮಾಡುವಂತೆ ದೂರಿರುತ್ತಾರೆ. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟ ಅಧಿಕಾರಿಗಳಿಗೆ ಹೆಚ್ಚುವರಿ ಪರಿವರ್ತಕ ಅಳವಡಿಸಲು ಪರಿಶೀಲಿಸಿ ಕ್ರಮವಹಿಸುವಂತೆ ಸೂಚಿಸಿದರು. |
| 18. | ಶ್ರೀ ಮಹೇಶ್, ಸೇನಾಪತಿಹಳ್ಳಿ, | ಸೇನಾಪತಿಹಳ್ಳಿ ರಸ್ತೆಯಲ್ಲಿರುವ ಬಾಗಿರುವ ಕಂಬವನ್ನು ಸರಿಪಡಿಸುವಂತೆ ದೂರಿರುತ್ತಾರೆ. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಆದಷ್ಟು ಬೇಗನೆ ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ಸೂಚಿಸಿದರು. |

Mahadevaiah

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ, ಬನ್ನೂರು

ಕ್ರಮ ಸಂಖ್ಯೆ : ಸ.ಕಾ.ನಿ (ವಿ)/ಹಿಸ/ಬ/2017-18/505-514

ದಿನಾಂಕ : 22.05.2017

ಪ್ರತಿಗಳು.

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜಿನಿಯರ್ (ವಿ),ಚಾವಿಸನಿನಿ., ನಂಜನಗೂಡು, ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು/ ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ.